ಬಳ್ಳಾರಿ ಜಿಲ್ಲೆಯಲ್ಲಿ ಗಣಿ ಮಾಲೀಕರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವುದು.

೧೨೭. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಗಣಿ ಮಾಲೀಕರು ನಿಗದಿತ ಪ್ರದೇಶಗಳಲ್ಲದೆ ಅರಣ್ಯ ಇಲಾಖೆಗೆ ಸೇರಿದ ಪ್ರದೇಶಗಳಲ್ಲಿ ಒತ್ತುವರಿ ಮಾಡಿರುವ ಬಗ್ಗೆ ಸಾರ್ವಜನಿಕರಿಂದ ಸರ್ಕಾರದವರಿಗೆ ದೂರುಗಳು ಬಂದಿರುವುದು ನಿಜವೆ,

ಆ) ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರ ಹೆಸರು ಹಾಗೂ ಅವರ ಅತಿಕ್ರಮಣದ ಗಣಿ ಪ್ರದೇಶದ ಸರ್ವೆ ನಂಬರ್ ವಿಸ್ತೀರ್ಣಗಳ ವಿವರಗಳನ್ನೊದಗಿಸುವುದು.

ಇ) ಒತ್ತುವರಿ ಮಾಡಿದ ಗಣಿ ಮಾಲೀಕರ ಮೇಲೆ ಸರ್ಕಾರ ಯಾವ ಕ್ರಮತೆಗೆದುಕೊಂಡಿದೆ ?

ಶ್ರೀ ಜಿ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ದೂರುಗಳು ಬಂದಿವೆ.

ಆ) ಈ ಬಗ್ಗೆ ವಿವರವಾದ ತನಿಖೆ ನಡೆಯುತ್ತಿದೆ. ತನಿಖೆ ಮುಗಿದ ನಂತರ ವಿವರ ಕೊಡಲಾಗುವುದು.

ಇ) ತನಿಖೆಯ ವಿವರ ಬಂದ ನಂತರ ಕೂಡಲೇ ಸಂಬಂಧಿಸಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಸಂಡೂರು ಅರಣ್ಯ ವಲಯವನ್ನು ಒಂದು ವಲಯವನ್ನಾಗಿ ರಚಿಸುವುದು

೧೨೮. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರು ಅರಣ್ಯ ವಲಯವು ಮೂರು ತಾಲೂಕುಗಳಿಗೆ ಸೇರಿರುವುದು ನಿಜವಲ್ಲವೆ ?

ಆ) ಸಂಡೂರು ತಾಲೂಕು ಪೂರ್ತಿಯಾಗಿ ಒಂದು ವಲಯವಾಗಿ ರಚಿಸಲು ಪರಿಶೀಲಿಸುವುದಾಗಿ ಈ ಹಿಂದೆ ಸರ್ಕಾರ ಆಶ್ವಾಸನೆ ನೀಡಿದ್ದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ ವಲಯ ಪುನರ್ ಸಂಘಟನೆ ಕಾರ್ಯ ಯಾವ ಹಂತದಲ್ಲಿದೆ ?

ಈ) ಈಗಲಾದರೂ ಸರ್ಕಾರದವರು ಸಂಡೂರು ತಾಲೂಕನ್ನು ಒಂದು ಅರಣ್ಯ ವಲಯವನಾ ಗಿ ಪರಿವರ್ತಿಸುವರೇ ?

ಶ್ರೀ ಜಿ.ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಆಡಳಿತಾತ್ಮಕ ದೃಷ್ಟಿಯಿಂದ ಇದು ಬೇಕಾಗಿರುವುದಿಲ್ಲ.

ಕರಿಯ ಅಭಿಯಂತರರ ನೇಮಕಾತಿ ಕುರಿತು

೧೧೮೫. ಶ್ರೀ ಗೋಪಾಲ ಮಂಕಂದ ಕಾನಡೆ (ಸಿರ್ಸಿ).— ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩ ರಿಂದ ೨೯-೨-೧೯೮೮ರ ವರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ನೇಮಕಾತಿ ಮಾಡಲಾದ ಜೂನಿಯರ್ ಇಂಜಿನಿಯರ್ ಹುದ್ದೆಗಳ ಸಂಖ್ಯೆ ಎಷ್ಟು ?